## ‘ಟ್ರಾಫಿಕ್ ಫೀಚರ್’

ಸಂಚಾರ ಕಿರಿಕಿರಿಯಿಂದ ತಪ್ಪಿಸಿಕೊಳ್ಳಬೇಕಾ? ಎಲ್ಲಿ ಸಂಚಾರ ಪರಿಸ್ಥಿತಿ ಹೇಗಿದೆ ಎಂಬುದನ್ನು ಮುಂಬೈ ಮತ್ತು ದೆಹಲಿ ನಗರದ ನೋಕಿಯ ಸ್ಮಾರ್ಟ್‌ಫೋನ್ ಬಳಕೆದಾರರು ಈಗ ತಿಳಿದುಕೊಳ್ಳಬಹುದು. ಈ ‘ಟ್ರಾಫಿಕ್ ಫೀಚರ್’ ಅನ್ನು ನೋಕಿಯ ಸಿಂಬಿಯಾನ್ ಮತ್ತು ಲ್ಯೂಮಿಯಾ ಹ್ಯಾಂಡ್ ಸೆಟ್‌ನಲ್ಲಿ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಇದು ಬಣ್ಣದ ಸಂಕೇತಗಳಲ್ಲಿ ಲಭ್ಯ. ಅಂದರೆ ಹಸಿರು, ಕಿತ್ತಳೆ ಮತ್ತು ಕೆಂಪು ಬಣ್ಣದ ಸಂಕೇತಗಳಲ್ಲಿ ಸಂಚಾರ ಪರಿಸ್ಥಿತಿ ಹೇಗಿದೆ ಎಂಬುದನ್ನು ಆಗಿಂದಾಗ್ಗೆ ಪರಿಷ್ಕರಿಸುತ್ತದೆ. ಜಿಪಿಎಸ್ ಇರುವ ಫೋನ್ ಹೊಂದಿರುವ ಗ್ರಾಹಕರು ಸಂಚಾರ ಪರಿಸ್ಥಿತಿ ಕುರಿತು ಮಾಡುತ್ತಿದ್ದ ವಿಚಾರಣೆಗಳನ್ನು ಆಧರಿಸಿ ಈ ‘ಟ್ರಾಫಿಕ್ ಫೀಚರ್’ ರೂಪಿಸಲಾಗಿದೆ. ಇದು ಎರಡೂ ನಗರಗಳಲ್ಲಿ 1500 ಕಿ.ಮೀ. ವ್ಯಾಪ್ತಿಯನ್ನು ಹೊಂದಿದೆ. ಕ್ರಮೇಣ ಹೊಸ ಹೊಸ ಮಾರ್ಗಗಳನ್ನು ಇದರ ವ್ಯಾಪ್ತಿಗೆ ತರಲಾಗುವುದು.

## ಹೊಸ ಸರ್ಚ್ ಎಂಜಿನ್

ಈ ಅಪ್ಲಿಕೇಶನ್ ಅನ್ನು ಫೋನ್‌ಗೆ ಅಳವಡಿಸುವ ಅಗತ್ಯವೇ ಇಲ್ಲ. ಆದರೆ ವೆಬ್ ಹುಡುಕಾಟದಲ್ಲಿ ಗೂಗ್ಲ್ ಮತ್ತು ಬಿಂಗ್‌ಗೆ ತೀವ್ರ ಪೈಪೋಟಿ ನೀಡುತ್ತಿದೆ. ಇದು ಎವ್ರಿಥಿಂಗ್.ಮಿ.

ಪ್ರತಿಯೊಂದು ಅಪ್ಲಿಕೇಶನ್ ಅನ್ನು ಡೌನ್‌ಲೋಡ್ ಮಾಡಿ ನಿಮ್ಮ ಫೋನ್‌ಗೆ ಅಳವಡಿಸಬೇಕಾಗುತ್ತದೆ. ಆದರೆ ಎಚ್‌ಟಿಎಂಎಲ್5 ಚಮತ್ಕಾರವಿದು. ಅಂದರೆ ವೆಬ್ ಸಹಾಯವಿಲ್ಲದೇ (ಡೌನ್‌ಲೋಡ್ ಮಾಡುವ ಅಗತ್ಯವಿಲ್ಲದೇ) ಸಾಮಾನ್ಯ ಅಪ್ಲಿಕೇಶನ್‌ನಂತೆ ಫೋನ್‌ನಲ್ಲಿ ಬಳಸಬಹುದು.




ನಿಮ್ಮ ಆ್ಯಂಡ್ರಾಯ್ಡ್ ಫೋನ್‌ನ ಅಡ್ರೆಸ್ ಬಾರ್‌ನಲ್ಲಿ ‘everything.me’ ಎಂದು ಟೈಪ್ ಮಾಡಿ. ವೆಬ್ ಅಪ್ಲಿಕೇಶನ್ ತೆರೆದುಕೊಂಡು ಸರ್ಚ್ ಜಾಗ ಕೂಡಾ ಕಾಣಿಸಿಕೊಳ್ಳುತ್ತದೆ. ಆ ಜಾಗದಲ್ಲಿ ನೀವು ಹುಡುಕಬೇಕಾದ ವೆಬ್‌ನ ಶಬ್ದವನ್ನು ಟೈಪ್ ಮಾಡಿ ಕ್ಲಿಕ್ ಮಾಡಿ. ಗೂಗ್ಲ್ ಅಥವಾ ಬಿಂಗ್‌ನಲ್ಲಿ ನಿಮಗೆ ಬೇಕಾದ ಫಲಿತಾಂಶ ಅಕ್ಷರ ರೂಪದಲ್ಲಿ ಕಾಣಿಸಿಕೊಂಡರೆ ಇದರಲ್ಲಿ ಐಕಾನ್ ರೂಪದಲ್ಲಿ ಕಾಣುತ್ತದೆ. ಹಿಂದೆ ಅದಕ್ಕೆ ಸಂಬಂಧಪಟ್ಟ ಫೋಟೊ ಕಾಣುತ್ತದೆ. ಇದು ಅತ್ಯಂತ ವೇಗವಾಗಿ ಕೂಡಾ ಕೆಲಸ ಮಾಡುತ್ತದೆ. 3ಜಿ ಅಥವಾ ವೈಫೈ ಸಂಪರ್ಕ ಇದ್ದರೆ ಸಾಕು. ಇದು ಆ್ಯಂಡ್ರಾಯ್ಡ್ ಮತ್ತು ಐಒಎಸ್‌ಗಳಲ್ಲಿ ಮಾತ್ರ ಲಭ್ಯ. ಸಾಮಾನ್ಯ ಡೆಸ್ಕ್‌ಟಾಪ್ ಮತ್ತು ಟ್ಯಾಬ್ಲೆಟ್‌ನಲ್ಲಿ ಕೆಲಸ ಮಾಡುವುದಿಲ್ಲ.

■ ಎಸ್.ತುಂಬೆ

## ಉಚಿತ ಎಸ್ಸೆಮ್ಮೆಸ್




ಉಚಿತವಾಗಿ ಎಸ್ಸೆಮ್ಮೆಸ್ ಕಳಿಸುವ ‘ವಾಟ್ಸ್‌ಆ್ಯಪ್ ಮೆಸ್ಸೆಂಜರ್’ ಇ–ಮೇಲ್ ಹಾಗೂ ವೆಬ್ ಹುಡುಕಲು ಬಳಸುವ ಅಂತರ್ಜಾಲ ಮಾಹಿತಿ ಯೋಜನೆಯನ್ನೇ ಬಳಸುತ್ತದೆ. ಪದೇ ಪದೇ ಎಸ್ಸೆಮ್ಮೆಸ್ ಕಳಿಸುವ ಅಭ್ಯಾಸವುಳ್ಳವರು ಅಥವಾ ವಿದೇಶದಲ್ಲಿ ಸ್ನೇಹಿತರಿರುವವರು ಇದರ ಬಳಕೆಯಿಂದ ಕೊಂಚ ಹಣ ಉಳಿತಾಯ ಮಾಡಬಹುದು.

ಮೊದಲು www.watsapp.com/downloadಗೆ ಹೋಗಿ. ನಂತರ ಅದನ್ನು ಡೌನ್‌ಲೋಡ್ ಮಾಡಿಕೊಳ್ಳಿ. ಎಸ್ಸೆಮ್ಮೆಸ್ ಅಲ್ಲದೇ ಫೋಟೊ ಮತ್ತು ವಿಡಿಯೋವನ್ನು ಕೂಡಾ ಕಳಿಸಬಹುದು. ಆದರೆ ಇದನ್ನು ಕಳಿಸುವವರಲ್ಲದೇ ಪಡೆಯುವವರು ಕೂಡಾ ಅಪ್ಲಿಕೇಶನ್ ಡೌನ್‌ಲೋಡ್ ಮಾಡಿಕೊಳ್ಳಬೇಕಾಗುತ್ತದೆ. ಇದು ಆಂಡ್ರಾಯ್ಡ್, ಐಫೋನ್, ಬ್ಲ್ಯಾಕ್‌ಬೆರಿ ಫೋನ್‌ಗಳಲ್ಲಿ ಇದನ್ನು ಬಳಸಬಹುದು.

## ವಿಂಡೋಸ್‌ಗೆ ರಂಗು

ಮೈಕ್ರೋಸಾಫ್ಟ್ ವಿಂಡೋಸ್‌ನ ನೋಟದಿಂದ ಏಕತಾನತೆಯ ಅನುಭವವಾಗುತ್ತಿದೆಯಾ? ಹಾಗಿದ್ದರೆ ನಿಮಗೆ ಬೇಕಾದಂತೆ ರಂಗು ತುಂಬಬಹುದಾದ ವಿಂಡೋಬ್ಲೈಂಡ್ಸ್ ಬಂದಿದೆ. ಬಣ್ಣ, ಅಕ್ಷರಗಳ ವಿನ್ಯಾಸ ಸೇರಿದಂತೆ ಮೆನುವನ್ನೆಲ್ಲ ಬದಲಾಯಿಸಬಹುದು. ಇವುಗಳನ್ನು wincustomize.comನಿಂದ ಉಚಿತವಾಗಿ ಡೌನ್‌ಲೋಡ್ ಮಾಡಬಹುದು.

## ಟ್ವಿಟರ್ ನೆರವು

ನೀವು ಟ್ವಿಟರ್‌ನ ಹೊಸ ಬಳಕೆದಾರರಾಗಿದ್ದರೆ ಅದರಲ್ಲಿ ಯಾವ ವ್ಯಕ್ತಿಯನ್ನಾದರೂ ಹುಡುಕಲು ಯತ್ನಿಸಿದರೆ ಸ್ವಲ್ಪ ಕಷ್ಟವೇ. ಆದರೆ ‘ಫಿಲ್ಟರ್ ಸ್ಕ್ವಾಡ್ ಡಿಸ್ಕವರ್’ ಡಿಸ್ಕವರ್ ಪೀಪಲ್ ಎಂಬ ಅಪ್ಲಿಕೇಶನ್ ಅನ್ನು ಹೊರತಂದಿದೆ.

ಈ ಅಪ್ಲಿಕೇಶನ್ ತೆರೆದು ಅದರಲ್ಲಿ ನೀವು ಸಂಪರ್ಕಿಸ ಬಯಸುವ ವ್ಯಕ್ತಿಯ ಹೆಸರನ್ನು ಟೈಪ್ ಮಾಡಿ. ಉಳಿದ ಅಪ್ಲಿಕೇಶನ್‌ನಲ್ಲಿ ಉದ್ದನೆಯ ಪಟ್ಟಿಯೇ ಅಕ್ಷರ ರೂಪದಲ್ಲಿ ಬರುತ್ತದೆ. ಆದರೆ ಇಲ್ಲಿ ಪರಮಾಣು ರೀತಿಯ ರೂಪದಲ್ಲಿ ಆ ವ್ಯಕ್ತಿಯ ಚಿತ್ರ ಬರುತ್ತದೆ. ಹೋಲಿಕೆಯುಳ್ಳವರನ್ನು ದಾರದ ರೂಪದಲ್ಲಿ ಅದಕ್ಕೆ ಜೋಡಿಸಲಾಗಿರುತ್ತದೆ. ನಿಮಗೆ ಬೇಕಾದ ವ್ಯಕ್ತಿಯ ಚಿತ್ರದ ಮೇಲೆ ಕ್ಲಿಕ್ ಮಾಡಿ. ಅದಕ್ಕೆ ಸಂಪರ್ಕ ಸೇತುವಾಗಿ ಇನ್ನೊಂದಿಷ್ಟು ವ್ಯಕ್ತಿಗಳ ಚಿತ್ರಗಳು ಡಿಎನ್‌ಎ ರೂಪದಲ್ಲಿ ಸೇರಿಕೊಂಡು ಬರುತ್ತವೆ. ಜೊತೆಗೆ ವ್ಯಕ್ತಿಚಿತ್ರಣ ಕೂಡಾ ಇರುತ್ತದೆ. ನಿಮಗೆ ಇಷ್ಟವಾಗಿದ್ದರೆ ಟ್ವಿಟರ್‌ನಲ್ಲಿ ಅನುಸರಿಸಿ. ಇಲ್ಲದಿದ್ದರೆ ಇಲ್ಲ.